2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತ ಪ್ರದನ್ಯಾ., ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ

**ಸಿ.ಸಿ. ನಂ. 232/2019**

| | | |
|---|---|---|
| ಸಾಕ್ಷಿದಾರರ ಹೆಸರು | ಲೋಲಾಕ್ಷಿ ಡಿ. ಎಸ್. | ಪ್ರಾಸ - 1 ಚಾ.ಸಾ - 1 |
| ತಂದೆಯ/ಗಂಡನ ಹೆಸರು | ಶ್ರೀನಿವಾಸ್ ಯಾದವ್ | |
| ವಯಸ್ಸು | 41 ವರ್ಷ | |
| ವೃತ್ತಿ | ಪೊಲೀಸ್ ಇನ್ಸ್ ಪೆಕ್ಟರ್, ಬಿಳಿಕೆರೆ. | |
| ವಾಸ ಸ್ಥಳ | ಮೈಸೂರು | |

ಸಾಕ್ಷಿಗೆ ದಿನಾಂಕಃ **20.11.2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎ. ಪಿ. ಪಿ. ಯವರಿಂದ,

ಆಗಸ್ಟ್ 2015 ರಿಂದ ಸೆಪ್ಟೇಂಬರ್ 2015 ವವರಗೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಮೈಸೂರು ಇಲ್ಲಿ ಪಿ.ಎಸ್.ಐ. ಆಗಿ ಕರ್ತ್ಯವ ನಿರ್ವಹಿಸಿರುತ್ತೇನೆ. ದಿನಾಂಕ 02.04.2018 ರಂದು ಮಾನ್ಯ ಪೊಲೀಸ್ ಅಧಿಕ್ಷಕರು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ರವರು/ಚಾಸಾ-26 ರವರು ನನಗೆ ಜ್ಞಾಪನದ ಮೂಲಕ ಶಿವಕುಮಾರು ಬಿನ್ ಸ್ವಾಮಿನಾಯಕ, ಆಲಂಬಾಡಿ ಕಾವಲು, ಕೆ.ಆರ್ ಪೇಟೆ ಅವರು ಪ್ರವರ್ಗ 1, ನಾಯಕ ಜಾತಿಗೆ ಸೇರಿರುದಾಗಿ, ನಾಯಕ ಜಾತಿಯ ಸುಳ್ಳು ಪ್ರಮಾಣ ಪತ್ರವನ್ನು ಪಡೆದು, ಅರ್ಜಿಯ ವಿಚಾರಣೆಯಿಂದ ದೃಡಪಟ್ಟಿರುತ್ತದೆ. ದಿನಾಂಕ 12.12.2017 ರಂದು ಜಿಲ್ಲಾ ಜಾತಿ ಪರಿಶೀಲಣೆ ಸಮಿತಿ ಮಂಡ್ಯ ರವರು ಆರೋಪಿಯು ಪಡೆದು ಸುಳ್ಳು ಪ್ರಮಾಣ ಪತ್ರವನ್ನು ರದ್ದು ಪಡಿಸುವಂತೆ ತಹಶಿಲ್ದಾರ್ ರವರಿಗೆ ಆದೇಶಿಸಿದ್ದು ಇದರಂತೆ ದಿನಾಂಕ 10.01.2018 ರಂದು ಮಾನ್ಯ ತಹಶಿಲ್ದಾರ್ ರವರು ಆರೋಪಿ ಪಡೆದ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ರದ್ದು ಪಡಿಸಿದ್ದು ಈ ಆದೇಶದ ಮೇರೆಗ ಎ.ಡಿ.ಜಿ.ಪಿ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ರವರು

ಆರೋಪಿ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿರುವ ಬಗ್ಗೆ ದೂರನ್ನು ದಾಖಲಿಸಲು ನಿರ್ದೇಶಿಸಿದ್ದು ಅದರಂತೆ ಮಾನ್ಯ ಎಸ್.ಪಿ ರವರು ಮೇಲ್ಕಂಡ ದಿನಾಂಕ 14.04.2018 ರ ಜ್ಞಾಪನದಂತೆ ನಾನು ದಿನಾಂಕ 05.04.2018 ರಂದು ಕೆ.ಆರ್ ಪೇಟೆ ಪೊಲೀಸ್ ಠಾಣೆಯಲ್ಲಿ ಶಿವಕುಮಾರ ಬಿನ್ ಸ್ವಾಮಿನಾಯಕ ಅವರ ವಿರುದ್ದ ಸುಳ್ಳು ಪ್ರಮಾಣ ಪತ್ರ ಪಡೆದಿರುತ್ತಾರೆ ಎಂದು ದೂರು ನೀಡಿರುತ್ತೇನೆ. ಸಾಕ್ಷಿಗೆ ಈಗ ಸದರಿ ದೂರನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯ ಸಹಿ ಇದ್ದು ಸದರಿ ದಾಖಲೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಪ್ರಕರಣದ ಕಡತವನ್ನು ಮುಂದಿನ ತನಿಕೆಗಾಗಿ ಪಡೆದಿರುತ್ತೇನೆ. ನಂತರ ಸದರಿ ಕಡತವನ್ನು ಚಾಸಾ-27 ರವರಿಗೆ ಮುಂದಿನ ತನಿಕೆಗಾಗಿ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಜೆ.ಎಲ್. ವಕೀಲರಿಂದ ,

ಯಾವುದೇ ವಿಚಾರ ತಿಳಿಯದೇ ಇದ್ದರೂ ಅಂಕಿ ಅಂಶಕ್ಕಾಗಿ ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರ ಮಾತನ್ನು ಕೇಳಿ ಆರೋಪಿತಗೆ ತೊಂದರೆ ನೀಡಲು ಸುಳ್ಳು ದೂರನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ .**

2 ನೇ ಅಪರ ಸಿವಿಲ್ **ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ .**